ಮಜ್ಜಿಗೆ ಕೊಟ್ಟಳು.

ಈ ವಿಷಯ ತಿಳಿದು ಸಂಬಂಧಿಕರು ಕರುವಿನಕಟ್ಟೆಯ ಮನೆಗೆ ಬಂದಿದ್ದರು, ಹನುಮಕ್ಕ ತನ್ನ ಮಗ ಸುರೇಶ ಮತ್ತು ಅವನ ಜೊತೆಗೆ ಇನ್ನೊಬ್ಬ ಸಂಬಂಧಿಕನನ್ನು ಜೊತೆ ಮಾಡಿ ಮೈಸೂರಿಗೆ ಹೋಗಿ ಅವರನ್ನು ಹುಡುಕಿ ತರುವಂತೆ ತಿಳಿಸುತ್ತಾ, ತನ್ನ ಮಗನನ್ನು ಒಳಮನೆಗೆ ಕರೆದೊಯ್ದು ಮಂತ್ರವಾದಿ ಕೊಟ್ಟ ನಿಂಬೆಹಣ್ಣನ್ನು ಅವನ ಕೈಗೆ ನೀಡಿ 'ಇದನ್ನು ಯಾವಾಗಲೂ ಜೋಪಾನವಾಗಿ ಜೊತೆಯಲ್ಲಿರಿಸಿಕೊಂಡಿರು' ಎಂದು ಪಿಸುದನಿಯಲ್ಲಿ ಹೇಳಿ ನಿಂಬೆಹಣ್ಣನ್ನು ಸುರೇಶನ ಜೇಬಿನಲ್ಲಿರಿಸಿ ಜೊತೆಗೆ ಸ್ವಲ್ಪ ಹಣವನ್ನೂ ಕೊಟ್ಟು ಕಳುಹಿಸಿಕೊಟ್ಟಳು.

ಸುರೇಶ ಮೈಸೂರಿಗೆ ಹೋಗುವ ಮುಂಚೆ ತನ್ನ ಮಾವ ಕರಿವೀರನ ಬಳಿ ಬಂದು ಮೈಸೂರಿನಲ್ಲಿ ಇಬ್ಬರೂ ಪತ್ತೆಯಾಗಿರುವ ವಿಷಯವನ್ನು ತಿಳಿಸುತ್ತಾ, ನಾನು ಹೋಗಿ ಬುದ್ಧಿ ಹೇಳಿ ಕರೆತರಲು ಪ್ರಯತ್ನಿಸುವುದಾಗಿ ತಿಳಿಸಿದ. 'ಆಗಿದ್ದು ಆಗಿ ಹೋಗಿದೆ ಮಾವ, ಬೇಡದ ವಿಷಯಗಳನ್ನೆಲ್ಲಾ ತಲೆಯಲ್ಲಿ ತುಂಬಿಕೊಂಡು ಊಟ, ನಿದ್ರೆ ಬಿಟ್ಟು ನಿನ್ನ ಆರೋಗ್ಯ ಕೆಡಿಸಿಕೊಳ್ಳಬೇಡ. ಮಕ್ಕಳ ಭವಿಷ್ಯದ ಬೆಳವಣಿಗೆಯ ಬಗ್ಗೆ ಗಮನವಿಟ್ಟುಕೊಂಡು ಒಳ್ಳೆಯ ಆಲೋಚನೆ ಮಾಡು. ನಾನು ನಿನಗೆ ಹೇಳುವಷ್ಟರಮಟ್ಟಿಗೆ ದೊಡ್ಡವನಲ್ಲ' ಎಂದು ತಿಳಿಸಿ ಮೈಸೂರಿಗೆ ಹೋಗಿಬರುವುದಾಗಿ ಹೇಳಿ ಹೊರಟ.



ಕರಿವೀರ ಹೆಚ್ಚು ಕಲಿತವನಲ್ಲ. ಎರಡೋ ಮೂರೋ ತರಗತಿ ಓದಿ ಶಾಲೆ ಬಿಟ್ಟು ಹೊಲ-ಮನೆಯ ಕೆಲಸದಲ್ಲಿ ತಂದೆ-ತಾಯಿಯರ ಜೊತೆಗಿನ ಕೆಲಸದಲ್ಲಿ ತೊಡಗಿದವನು. ತುಂಬಾ ಶ್ರಮಜೀವಿ. ಊರಿನಲ್ಲಿ ಯಾರೊಡನೆಯೂ ಬೆರೆಯದೆ ತಾನಾಯಿತು ತನ್ನ ಕೆಲಸವಾಯಿತು ಎಂಬಂತೆ ಇದ್ದು, ರೈತಾಪಿ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದವನು. ಕರಿವೀರ ತನ್ನ ಹೆಂಡತಿ ಮನೆ ಬಿಟ್ಟು ಹೋದದ್ದು ಮನಸ್ಸಿಗೆ ಹಚ್ಚಿಕೊಂಡು ಊರಲ್ಲಿ ಮಾರ್ಯಾದೆ ಹೋದದ್ದರ ಬಗ್ಗೆ ಯೋಚಿಸುತ್ತಾ, ಮನೆಗೆ ಬಾರದೇ ತೋಟದಲ್ಲೇ ಇರುತ್ತಾ ಏನನ್ನೂ ಮಾಡದೇ ಕುಳಿತೋ, ಮಲಗಿಯೋ ಒಂಟಿಯಾಗಿ ಕಾಲ ಕಳೆಯುತ್ತಿದ್ದ. ಅವನು ಅನ್ನಪೂರ್ಣಳ ಜೊತೆಗೆ ಎಂದಿಗೂ ವೈಮನಸ್ಸಿನಿಂದ ಇರಲಿಲ್ಲ. ಕರಿವೀರ ಯಾವ ವಿಷಯಕ್ಕೂ ಗಲಾಟೆ ಮಾಡುವ ಸ್ವಭಾವದವನಲ್ಲ. ಮನೆಯ ಹಣಕಾಸಿನ ವ್ಯವಹಾರವೂ ಸೇರಿದಂತೆ ಎಲ್ಲವನ್ನೂ ಅವಳೇ ನಡೆಸುತ್ತಿದ್ದುದ್ದನ್ನು ನೆನಪಿಸಿಕೊಂಡು ಮೌನವಾಗಿ ನೆಲದೊಳಗೆ ಹುದುಗಿಹೋಗಿದ್ದ. ನನ್ನಿಂದ ಆಗಿರಬಹುದಾದ ತಪ್ಪಿನ ಬಗ್ಗೆ ಚಿಂತಿಸುತ್ತಾ ಖಿನ್ನತೆಗೆ ಒಳಗಾದ. ಪ್ರತಿ ವರ್ಷ ಊರಿನ ದೇವರಿಗೆ ಶ್ರದ್ಧೆಯಿಂದ ನಡೆಮುಡಿ, ಪಂಜು ಸೇವೆ ಮಾಡುತ್ತಿದ್ದರೂ ತನಗೆ ಈ ಗತಿ ಬಂದಿದೆ. ನಾನು ಮಡಿ, ನೇಮ-ನಿಷ್ಠೆ ಮಾಡುವುದರಲ್ಲಿ ಎಲ್ಲಾದರೂ ತಪ್ಪಿದ್ದೇನೆಯೇ? ಎಂದು ತನ್ನೊಳಗೇ ಪ್ರಶ್ನೆ ಮಾಡಿಕೊಂಡು ಕೂರುತ್ತಿದ್ದ. ತನ್ನ ಸಂಬಂಧಿಕರು ಬಂದು ಮಾತನಾಡಿಸಿ, 'ಧೈರ್ಯಗೆಡಬೇಡ ಕರಿವೀರಣ್ಣ ಇಬ್ಬರು ಮಕ್ಕಳಿದ್ದಾರೆ, ಸ್ವಲ್ಪ ದಿನ ಎಲ್ಲಾ ಸರಿ ಹೋಗುತ್ತದೆ. ಇಬ್ಬರು ಮಕ್ಕಳಾದ ಮೇಲೆ ಈ ವಯಸ್ಸಿನಲ್ಲಿ ಎಂತಹ ಕೆಲಸ ಮಾಡಿದ್ದಾಳೆ ನಿನ್ನ ಹೆಂಡತಿ. ಆಕೆಗೆ ಬುದ್ಧಿ ನೆಟ್ಟಗಿದ್ದಂತಿಲ್ಲ! ತಿಳಿದೋರು ಯಾರಾದರೂ ಈ ರೀತಿ ಮಾಡುತ್ತಾರ ನಿನ್ನಂತಹ ಮನುಸನಿಗೆ?' ಎಂದು ಸಮಾಧಾನ ಮಾಡುತ್ತಿದ್ದರು. ಈ ರೀತಿಯ ಮಾತುಗಳನ್ನು ಕೇಳಿದಾಗ ಕರಿವೀರನಿಗೆ ದುಃಖ ಮತ್ತಷ್ಟು ಉಮ್ಮಳಿಸಿ ಬಂದು ಆಕೆಯ ಬಗೆಗಿನ ಕೋಪ ತಡೆದುಕೊಳ್ಳಲಾರದಷ್ಟು ನೆತ್ತಿಗೇರುತ್ತಿತ್ತು. ಊಟವನ್ನೂ ಮಾಡದೇ ಜಮೀನಿನಲ್ಲಿಯೇ ಕಾಲ ಕಳೆಯುತ್ತಾ 'ಆಕೆ ಅಂತಹವಳಲ್ಲ. ಮಕ್ಕಳನ್ನು, ನನ್ನನ್ನೂ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಹೊತ್ತಿಗೆ ಸರಿಯಾಗಿ ಊಟ ಮಾಡಿಡುವುದು, ಎರಡು ದಿನಕ್ಕೊಮ್ಮೆ ಬಿಸಿ ನೀರು ಕಾಯಿಸಿ ಸ್ನಾನ ಮಾಡಿಸುವುದು, ಜಮೀನಿನ ಕೆಲಸದಲ್ಲಿ ಆಗಾಗ ಬಂದು ನೆರವಾಗುವುದು, ಮನೆಗೆ ಬೇಕಾದ ಸಾಮಾಗ್ರಿಗಳನ್ನು ಆಕೆಯೇ ಕೊಂಡು ತರುತ್ತಿದ್ದುದು ಇವೆಲ್ಲವುಗಳನ್ನು ನೆನಪಿಸಿಕೊಳ್ಳುತ್ತಾ ಆಕೆಗೆ ಈ ವಯಸ್ಸಿನಲ್ಲಿ ಎಂತಹ ಮೋಹವೋ ಏನೋ? ನನ್ನ ಬಿಟ್ಟು ಹೋಗಿದ್ದಾಳೆಂದರೆ ನನಗೇ ನಂಬಿಕೆಯೇ ಬರುತ್ತಿಲ್ಲ' ಎಂದುಕೊಳ್ಳುತ್ತಾ 'ಇನ್ನು ಊರಿನಲ್ಲಿ ಯಾವ ಮುಖ ಇಟ್ಟುಕೊಂಡು ಓಡಾಡಲಿ' ಎಂದುಕೊಂಡು